

# ಐರ್ಲೆಂಡ್‌ನ ಆಭರಣ ಅಥ್ಲೋನ್

■ ಪ್ರೊ. ಸಿ. ಸಿದ್ದರಾಜು ಆಲಕೆರೆ

ಐರ್ಲೆಂಡ್ ದೇಶದ ಮಧ್ಯಭಾಗದಲ್ಲಿ ಅಥ್ಲೋನ್ ಪಟ್ಟಣವಿದೆ. ವೆಸ್ಟ್‌ಮೀತ್ ಕೌಂಟಿ (ನಮ್ಮಲ್ಲಿ ಜಿಲ್ಲಾ ಕೇಂದ್ರ ವಿಭಾಗದಂತೆ) ವ್ಯಾಪ್ತಿಗೆ ಸೇರುವ ಈ ಪಟ್ಟಣದ ಮಧ್ಯೆ ಶಾನನ್ ನದಿ ಹಾದು ಹೋಗಿದೆ. ನದಿಯ ಎಡ–ಬಲ ದಂಡೆಯ ಮೇಲಿನ ಈ ಪಟ್ಟಣವನ್ನು ಅಥಾಲೂಯಿನ್ ಎಂದು ಐರಿಷ್ ಭಾಷೆಯಲ್ಲಿ ಕರೆಯಲಾಗಿದೆ. ಅಥಾಲೂಯಿನ್ ಎನ್ನುವುದೇ ಅಪಭ್ರಂಶಗೊಂಡು ಅಥ್ಲೋನ್ ಎಂದಾಗಿದೆ. ಕೋಟೆ ಹಾಗೂ ಚರ್ಚ್‌ಗಳ ಐತಿಹಾಸಿಕ ಕುರುಹುಗಳೊಂದಿಗೆ, ಪ್ರಸಿದ್ಧ ವ್ಯಾಪಾರ ಕೇಂದ್ರವೂ ಆಗಿರುವ ಪಟ್ಟಣ ಸಹೃದಯರ ಗಮನಸೆಳೆಯುವಂತೆ ಸ್ವಚ್ಛವಾಗಿದೆ, ಅಂದವಾಗಿದೆ.

ಶಾನನ್ ನದಿಯ ಹಸಿರು ಪರಿಸರದಲ್ಲಿರುವ ಈ ಸುಂದರ ಪಟ್ಟಣ ವಿಶ್ವಪ್ರವಾಸಿಗರ ಅಚ್ಚುಮೆಚ್ಚಿನ ಕೇಂದ್ರಗಳಲ್ಲೊಂದು. ಅಥ್ಲೋನ್ ಪಟ್ಟಣದಲ್ಲಿರುವ ಅತ್ಯಂತ ಹಳೆಯ ಕಟ್ಟಡ ಎಂದರೆ 'ಅಥ್ಲೋನ್ ಕ್ಯಾಸಲ್'. ಇದು ಒಂದು ಐತಿಹಾಸಿಕ ಕೋಟೆ. ಪ್ರಸ್ತುತ ಮ್ಯೂಸಿಯಂ ಆಗಿರುವ ಇದು ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಕೋಟೆಯ ಎಡಗಡೆ ಪೀಟರ್ ಮತ್ತು ಪಾಲ್‌ಚರ್ಚ್ ಹಾಗೂ ಬಲಗಡೆ ಮುಖ್ಯರಸ್ತೆಯಲ್ಲಿರುವ ಗಿನ್ನಿಸ್ ದಾಖಲೆ ಪುಸ್ತಕ ಸೇರಿರುವ ಹಳೆಯ ಪಬ್ ಇದೆ.

ಹನ್ನೊಂದನೇ ಶತಮಾನದಲ್ಲಿ ಶಾನನ್ ನದಿಗೆ ಎರಡು ಕಡೆಯ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಕೊನಾಚ್ಟ ರಾಜನು ಸುಮಾರು 100 ಮೀಟರ್ ಉದ್ದದ ಮರದ ಸೇತುವೆ ನಿರ್ಮಿಸಿದನು. ಈ ಸೇತುವೆಯ ಸನಿಹದಲ್ಲೇ ನದಿಯ ಬಲ ದಡದ ಮೇಲೆ ಕೋಟೆ ನಿರ್ಮಾಣವಾಗಿದೆ. ಈ ಕೋಟೆ 1129ರಲ್ಲಿ ಮರದಿಂದ ನಿರ್ಮಿಸಲಾಗಿತ್ತು. 13ನೇ ಶತಮಾನದ ಆರಂಭದಲ್ಲಿ ಅದೇ ಸ್ಥಳದಲ್ಲಿ ಕಲ್ಲಿನ ಕೋಟೆ ನಿರ್ಮಿಸಲಾಯಿತು. 1690ರಲ್ಲಿ ನಡೆದ 'ಅಥ್ಲೋನ್ ಮುತ್ತಿಗೆ' (ಮೈಟ್ ಯುದ್ಧ) ಸಂದರ್ಭ ಈ ಕೋಟೆ ಹಾನಿಗೊಳಗಾಯಿತು. ನಂತರ ಕೋಟೆಯನ್ನು ಭದ್ರಪಡಿಸಲಾಯಿತು.

ಕೋಟೆಯ ಹೊರಭಾಗ



